

ಜಗತ್ತಿನಲ್ಲಿ ಸುಮಾರು 6500 ಭಾಷೆಗಳಿವೆಯಂತೆ. ಅಷ್ಟೂ ಭಾಷೆಗಳಿಗೆ ಅವಶ್ಯಕತೆ ಇರುವ, ಸುಮಾರು 150ಕ್ಕೂ ಹೆಚ್ಚಿನ ಧ್ವನಿಗಳನ್ನು ಗ್ರಹಿಸುವ ಮತ್ತು ತಮ್ಮ ಬಾಯಿಯಿಂದ ಹೊರಡಿಸುವ ಸಾಮರ್ಥ್ಯವನ್ನು ಮಕ್ಕಳು ಪಡೆದಿರುತ್ತಾರೆ ಎನ್ನುವುದು ಎಷ್ಟೊಂದು ಅದ್ಭುತ ವಿಷಯ! ಈಗ ಭಾಷೆ, ಶಬ್ದ, ವಾಕ್ಯ, ವ್ಯಾಕರಣ ಎಲ್ಲವನ್ನೂ ಕಲಿತಿರುವ ನಮ್ಮಿಂದ ಅಷ್ಟೊಂದು ಧ್ವನಿಗಳನ್ನು ಹೊರಡಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ನಾವು 'ಭಾಷೆ'ಯ ಬಳಕೆಗೆ ಈಗಾಗಲೇ ಪಳಗಿ ಹೋಗಿರುತ್ತೇವೆ. ಆದರೆ ಅದೇ ಹುಟ್ಟಿದ ಮಗುವಿಗೆ ಪ್ರತಿ ಉಚ್ಛಾರಣೆಯೂ ಒಂದು ಸಹಜದತ್ತವಾದ ಪ್ರತಿಕ್ರಿಯೆ ಆಗಿರುತ್ತದೆ.

ಮಗುವು ತಾನು ಹುಟ್ಟಿದಾಗಿನಿಂದ ಕೇಳುವ ಎಲ್ಲ ಧ್ವನಿಗಳನ್ನು ಉಚ್ಚರಿಸಲು, ಪ್ರಯೋಗಿಸಲು ಪ್ರಯತ್ನಿಸುತ್ತಿರುತ್ತದೆ. ಉದಾಹರಣೆಗೆ, ಮಗು ಹಸಿವಿನಿಂದ ಅತ್ತಾಗ, 'ಅಮ್ಮ ಬಂದೆ..' ಎನ್ನುತ್ತಾ ತಾಯಿ ಮಗುವಿನ ಹತ್ತಿರ ಸಮೀಪಿಸಿದಾಗ, ಮ್..ಮ್ಮ್ .. ಎಮ್...ಅಮ್.. ಎಂದು ಪ್ರಾಯೋಗಿಕವಾಗಿ ಮಗು ಹೊರಡಿಸಿದ ದನಿಗೆ ತಾಯಿ ಅಥವಾ ಪೋಷಕರು ಬಂದು ಮಗುವನ್ನು ಎತ್ತಿ ಕರೆದುಕೊಂಡಾಗ, ಓ ಎಂದು ಪ್ರತಿಕ್ರಿಯೆ ನೀಡಿದಾಗ ಮಗುವು ತನ್ನಲ್ಲೇ ಅರ್ಥೈಸಿಕೊಳ್ಳುತ್ತದೆ. ಈ 'ಮ್ಮ್' ಉಚ್ಚಾರ ನನಗೆ ಆರಾಮವನ್ನು ನೀಡಲು ಬರುವಂತದ್ದು ಎಂದು! ಅಂತೆಯೇ ತನ್ನ ಮೆದುಳಿನಲ್ಲಿ ನೋಂದಣಿಸಿಕೊಳ್ಳುತ್ತದೆ.

ಅದಕ್ಕೆ ರೂಪು ಕೊಡುವಂತೆ ನಾವು ಬಳಸುವ ಅಮ್ಮ ಎಂಬ ಉಚ್ಛಾರಣೆಯನ್ನು ಅನುಕರಣೆ ಮಾಡಿ ಆ ಉಚ್ಛಾರಣೆಯ ಪುನರ್ ಬಳಕೆಯನ್ನು ಪ್ರಾರಂಭಿಸುತ್ತದೆ. ಒಮ್ಮೆ ಅವಲೋಕಿಸಿ, ಒಂದು ಸಾವಿರ ಜನರ ಹೆಸರುಗಳನ್ನು ನಮಗೆ ತಿಳಿಸಿ ನಂತರದಲ್ಲಿ ಅದನ್ನು ಪುನರುಚ್ಚರಿಸಲು ತಿಳಿಸಿದರೆ ನಮಗೆ ಜ್ಞಾಪಕ ಶಕ್ತಿ ಸಾಲದೇನೋ. ಅದೇ ಮಗುವೊಂದು ತಾನು ಕೇಳಿದ ಲಕ್ಷಗಟ್ಟಲೇ ಧ್ವನಿ ಶಬ್ದ, ಪದಗಳನ್ನು ಕಲಿತು ಸಾಂದರ್ಭಿಕವಾಗಿ ಉಚ್ಚರಿಸಲು ಪ್ರಾರಂಭಿಸುವ ಸಾಮರ್ಥ್ಯವನ್ನು ಮತ್ತು ವೇಗವನ್ನು ಪಡೆದಿರುತ್ತದೆ. ಈ ಸ್ವಯಂ ಕಲಿಕೆ ಮಗುವಿನಲ್ಲಿ ನಿರಂತರವಾದುದು ಮತ್ತು ಅವರ ಅರಿವಿಗೇ ಸಿಗದೇ ಆಗುವ ಕ್ರಿಯೆ!

## ಮಾತು ಕಲಿಕೆಯ ಮೊದಲ ಹಂತ

ಮಗುವಿನ ಧ್ವನಿ ಗಮನಿಸುವಿಕೆ, ಅದು ತಾಯಿಯ ಹೊಟ್ಟೆಯಲ್ಲಿದ್ದಾಗ ನಡೆದಿರುತ್ತದೆ. ಅಸ್ಪಷ್ಟವಾಗಿ ಶಬ್ದಗಳನ್ನು ಕೇಳಿದ್ದರೂ, ಹೊರಗಿನ ವಾತಾವರಣಕ್ಕೆ ಬಂದ ನಂತರ, ಸಾಮಾನ್ಯವಾಗಿ ಕೇಳಿಬರುವ ಎಲ್ಲರ ಧ್ವನಿಗಳನ್ನು ಗುರುತಿಸಬಲ್ಲದು, ಅದರಲ್ಲೂ ತಾಯಿಯ ಧ್ವನಿಗೆ ಮೊದಲ ಆದ್ಯತೆ!

ಏಕೆಂದರೆ ತಾಯಿಯ ಹೊಟ್ಟೆಯಲ್ಲಿ 9 ತಿಂಗಳು ಇದ್ದ ಮಗುವಿಗೆ, ತಾಯಿಯ ಧ್ವನಿಯ ಕಂಪನದ ಹೆಚ್ಚಿನ ಅನುಭವವಿರುತ್ತದೆ. ಇದೇ ಕಾರಣಕ್ಕಾಗಿ, ಎಂತಹ ಗಲಾಟೆಯ ಸ್ಥಳದಲ್ಲಿಯೂ ಮಗುವು ತನ್ನ ತಾಯಿಯ ಧ್ವನಿಯನ್ನು ಗುರುತಿಸಿ, ತಾಯಿಯ ಕಡೆಗೆ ಹೊರಳುವುದು. ಹಾಗೆಯೇ, ಇತರರು ಮಾತನಾಡಿದ ಅನ್ಯ ಭಾಷೆಯ ಉಚ್ಛಾರಣೆ, ತಾನು ಈ ವರೆಗೆ ತನ್ನ ಪಾಲಕರ ಮೂಲಕ ಕೇಳಿದ ಉಚ್ಛಾರಣೆಗಿಂತಲೂ ಭಿನ್ನವಾದುದು ಎನ್ನುವುದೂ ಕೂಡ ಆ ಮಗುವಿನ ಮೆದುಳಿಗೆ ಸಂವಹನೆಯನ್ನು ನೀಡುತ್ತದೆ.

## ಶರ ವೇಗದ ಕಲಿಕೆ

ಸಹಜವಾಗಿ ಮಕ್ಕಳಲ್ಲಿ ಈ ರೀತಿಯ ಕಲಿಕೆ, ಹೋಲಿಕೆ, ಅನುಕರಣೆ ಎಲ್ಲವೂ ಅತ್ಯಂತ ವೇಗವಾಗಿ ಅವುಗಳ ಮನಸ್ಸಿನಲ್ಲಿ ನಡೆಯುತ್ತಿರುತ್ತದೆ. ಇದರ ಜೊತೆಗೆ, ಮಗುವಿನೊಂದಿಗೆ ನಾವು ನಡೆಸುವ ಪರಸ್ಪರ ಸಂಭಾಷಣೆ, ಮುಖ ಭಾವಗಳು, ಸೂಚನೆಗಳು, ಸನ್ನೆಗಳು ಮಗುವಿಗೆ ಇನ್ನೂ ಹೆಚ್ಚಿನ ಭಾಷಾ ಸೆಳೆತಕ್ಕೆ ಸಹಾಯಕವಾಗುತ್ತದೆ. ಉದಾಹರಣೆಗೆ, ಒಂದು 1.5 ವರ್ಷದ ಮಗುವಿಗೆ, 'ಅಲ್ಲಿ ನೋಡು ಪುಟ್ಟದಾದ ಮೊಲದ ಮರಿ ಎಷ್ಟು ಚಂಗನೆ ಪುಟಿದು ಓಡುತ್ತಿದೆ' ಎಂದು ಕೈ ಬೆಟ್ಟು ಮಾಡಿ ತೋರಿಸಿದರೆ, ಮಗುವು ನಮ್ಮ ಮುಖದಲ್ಲಿನ ಉತ್ಸಾಹ, ಕೈ ಬೆಟ್ಟು ಮಾಡಿ ತೋರಿಸಿದ ಸನ್ನೆ ಮತ್ತು ನಮ್ಮ ಬಾಯಿಂದ ಹೊರ ಹೊಮ್ಮಿದ ಪದಪುಂಜಗಳು ಇದೆಲ್ಲವನ್ನೂ ಏಕಕಾಲದಲ್ಲಿ ಗಮನಿಸುತ್ತದೆ.

ಹೊರನೋಟಕ್ಕೆ ಮಗುವು ನಾವು ತಿಳಿಸಿದ ಕಡೆಗೆ ತನ್ನ ಕತ್ತು ತಿರುಗಿಸಿದುದು ಕಂಡು ಬಂದರೂ, ಮಗುವು ಮೊದಲು ನೋಡುವುದು ಕೈ ಸನ್ನೆ ಮಾಡಿದ ವಸ್ತುವಿನೆಡೆಗೆ. ಆ ವಸ್ತುವಿಗೆ ಮೊಲ ಎಂದು ಕರೆಯುತ್ತಾರೆ ಎಂಬುದನ್ನು, ನಾವು ಪುನರಾವರ್ತಿಸಿ ತಿಳಿಸುವ ಸಂಧರ್ಭದಲ್ಲಿ ಮನನ ಮಾಡಿಕೊಳ್ಳುತ್ತದೆ. ನಂತರದಲ್ಲಿ ಹಂತ ಹಂತವಾಗಿ, ಆ ವಸ್ತುವಿನ ಆಕಾರ, ಬಣ್ಣ, ರೂಪ ಇತ್ಯಾದಿ ವಿಷಯಗಳನ್ನು ಅರ್ಥೈಸಲು ಪ್ರಾರಂಭಿಸುತ್ತದೆ.

ಅದರ ಜೊತೆಗೆ, ನಾವು ಹಿರಿಯರು ಬಳಸಿದ ಅಕ್ಷರಗಳ ಉಚ್ಛಾರಣೆ ಸರಿಯಾಗಿ ಬರದಿದ್ದರೂ, ನಮ್ಮ ಧ್ವನಿಯ ಏರಿಳಿತವನ್ನೇ ಗಮನಿಸಿ ಮಕ್ಕಳು ಪದಗಳನ್ನು ಕಲಿಯುವಲ್ಲಿ